# GHS KADAMBAR

## LITTLE KITES PRESENTS



# ಚಿಲುಮೆ_2019

# ചിലുമെ_2019

## DIGITAL MAGAZINE - 2019




GHS KADAMBAR...view 1



GHS KADAMBAR...view 2

# Editorial Board

Chief Editor : Shiva Kumara.K-Headmaster
Staff Editor : Hemalatha.N-Little kites Mistress
Student Editor : Ashwini-IXB

Members

Ranjith.P.V-SITC
Moosa Kunhi.D-JSITC&Little Kites Master
Dharmananda Kurup.A.R-HST Hindi
Gopi.V-HST Kannada
Mohammed Nisar-HST Malayalam
Abokare.K-HST Phy.Science
Geetha-HST Maths
Anish.k-IXB
Abdul Sathar-IXB
Thilak-IXB
Nafeesath Asna-IXC
Mariamma Zunaida-IXC
Mariamath Kashiya-IXC
Mohammed Shair.K-IXA
Moideen Afeez-IXA
Fathimath Saniya.A-IXA

Technical Support: Moosakunhi and Ranjith. PV




# LITTLE KITES BATCH-2019-2021

.................................................................

## ಮುನ್ನುಡಿ



ಮಾಹಿತಿ ತಂತ್ರಜ್ಞಾನದ ಅಂಗವಾದ ಲಿಟಲ್ ಕೈಟ್ ಕ್ಲಬ್ ನ ಪ್ರಯತ್ನದ ಫಲವಾಗಿ ಸರಕಾರಿ ಪ್ರೌಢಶಾಲೆ ಕಡಂಬಾರು ಇಲ್ಲಿನ ವಿದ್ಯಾರ್ಥಿಗಳ ‘ಚಿಲುಮೆ_2019’ ಎಂಬ ಡಿಜಿಟಲ್ ಮ್ಯಾಗಝಿನ್ ವೈವಿಧ್ಯಮಯ ಕೌಶಲ್ಯಗಳ ಚಿಮ್ಮುವ ಚಿಲುಮೆಯಾಗಿ ಮೂಡಿ ಬಂದಿರುತ್ತದೆ. ವಿದ್ಯಾರ್ಥಿಗಳ ಪ್ರಯತ್ನ ಮತ್ತು ಅಧ್ಯಾಪಕರ ಪ್ರೋತ್ಸಾಹದ ಪ್ರತಿರೂಪವಾಗಿ ಈ ಡಿಜಿಟಲ್ ಮ್ಯಾಗಝಿನ್ ಹೊರಹೊಮ್ಮಿದೆ. ಇದು ವಿದ್ಯಾರ್ಥಿಗಳ ಮುಂದಿನ ಜೀವನದಲ್ಲಿ ಸಹಾಯಕವಾಗಿ ಇನ್ನಷ್ಟು ಸಾಧನೆಯನ್ನು ಮಾಡಲು ಪ್ರೋತ್ಸಾಹಕರವಾಗಲಿ.

*ಶ್ರೀ. ಶಿವಕುಮಾರ. ಕೆ, ಮುಖ್ಯೋಪಾಧ್ಯಾಯರು*

## ಅಧ್ಯಾಪಕ ಸಂಪಾದಕೀಯ



ಸರಕಾರಿ ಪ್ರೌಢ ಶಾಲೆ ಕಡಂಬಾರು ಚಿಲುಮೆ_2019 ಎಂಬ ಡಿಜಿಟಲ್ ಮ್ಯಾಗಸಿನ್ ಹೊರತರುವುದು ಬಹಳ ಸಂತೋಷದ ವಿಷಯ. ಲಿಟಲ್ ಕೈಟ್ಸ್ ಕ್ಲಬ್ ನ ಭಾಗವಾಗಿ ತಯಾರಿಸುವ ಈ ಮ್ಯಾಗಸಿನ್ ಬಹಳ ಉಪಯುಕ್ತವಾದ ಹಲವಾರು ಲೇಖನಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳ ಪ್ರತಿಭೆಯನ್ನು ತೋರ್ಪಡಿಸುವ ಸೃಜನಾತ್ಮಕ ಸೃಷ್ಟಿಗಳು ಈ ಮ್ಯಾಗಸಿನಿನಲ್ಲಿ ಅಳವಡಿಸಲಾಗಿದೆ. ನಮ್ಮ ಶಾಲೆಯ ವಿದ್ಯಾರ್ಥಿಗಳ ಪ್ರತಿಭೆಯ ಕನ್ನಡಿಯಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಮ್ಮ ಶಾಲೆಯ ಲಿಟಲ್ ಕೈಟ್ಸ್ ನ ವಿದ್ಯಾರ್ಥಿಗಳು ಅವಿರತ ಪ್ರಯತ್ನ ನಡೆಸಿದ್ದಾರೆ. ಮುಖ್ಯೋಪಾಧ್ಯಾಯರೂ ಶಿಕ್ಷಕರೂ ನಮಗೆ ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಲಿಟಲ್ ಕೈಟ್ಸ್ನ ಕ್ಲಬ್ ನ ಇಂತಹ ಯೋಜನೆಗಳು ಇನ್ನೂ ಮುಂದುವರಿಯಲಿ. ಇದಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

***ಹೇಮಲತ. ಎನ್. ಕೈಟ್ ಅಧ್ಯಾಪಕಿ***

..........................................................................................

## *ವಿದ್ಯಾರ್ಥಿ ಸಂಪಾದಕೀಯ*



ಲಿಟಲ್ ಕೈಟ್ಸ್ ಕ್ಲಬ್ ನ ಭಾಗವಾಗಿ ತಯಾರಿಸುವ ಡಿಜಿಟಲ್ ಮ್ಯಾಗಸಿನ್ ಚಿಲುಮೆ 2019 ನ್ನು ಹೊರತರುತ್ತಿರುವುದು ಬಹಳ ಸಂತೋಷದ ವಿಷಯ. ಲಿಟಲ್ ಕೈಟ್ಸ್ ಎಂಬ ಕ್ಲಬ್ ನಮಗೆ ಬಹಳ ಉಪಯುಕ್ತವಾಗಿದೆ. ಈ ಕ್ಲಬ್ ನ ಸದಸ್ಯರಿಗೆ ತಮ್ಮ ಮಾಹಿತಿ ತಂತ್ರಜ್ಞಾನದಲ್ಲಿರುವ ಅಭಿರುಬೆಯನ್ನು ತೋರಿಸಲು ಅದೆಷ್ಟೋ ಅವಕಾಶಗಳು. ನಾಯಕತ್ವ ಗುಣವನ್ನು ಬೆಳೆಸಲಿರುವ ಅವಕಾಶಗಳಿವೆ. ಈ ಮ್ಯಾಗಸಿನ್ ಹೊರತರಲು ನಮಗೆ ಸ್ಪೂರ್ತಿಯನ್ನು ನೀಡಿದ ಮುಖ್ಯೋಪಾಧ್ಯಾಯರಿಗೂ ಶಿಕ್ಷಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಲಿಟಲ್ ಕೈಟ್ಸ್ ನ ಸದಸ್ಯರ ಸಹಕಾರದಿಂದ ಈ ಮ್ಯಾಗಸಿನ್ ಕ್ಲಪ್ತ ಸಮಯಕ್ಕೆ ಹೊರತರಲು ಸಾಧ್ಯವಾಯಿತು. ಹೈಸ್ಕೂಲ್ ವಿಭಾಗದ ಹಲವು ವಿದ್ಯಾರ್ಥಿಗಳು ಲೇಖನವನ್ನು ನೀಡಿದ್ದಾರೆ. ನಮ್ಮೊಂದಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

***~~~ ಅಶ್ವಿನಿ. 9***

## ವಿಷಯಾನುಕ್ರಮಣಿಕೆ


| Sl.No | ವಿಷಯ/ಶೀರ್ಷಿಕೆ | ರಚನೆ/ಸಂಗ್ರಹ |
|---|---|---|
| 1 | ಕವರ್ ಪೇಜ್ | - |
| 2 | Editorial Board | |
| 3 | Little Kite Unit Batch | |
| 4 | ಸಂಪಾದಕರ ಮಾತು | |
| 5 | ಅಧ್ಯಾಪಕ ಸಂಪಾದಕೀಯ | |
| 6 | ವಿದ್ಯಾರ್ಥಿ ಸಂಪಾದಕೀಯ | |
| 7 | ಅಂದದ ಹೂ ಚಂದದ ಹೂ | Fathimath Harfana 9A |
| 8 | ಮಂಜೇಶ್ವರ | Mohammed Nisar (Tchr) |
| 9 | ಅನುಭವ ಟಿಪ್ಪಣಿ | Mohammed Afreez 9A |
| 10 | ಚಿಣ್ಣರ ಚಿತ್ರ | Mariammath Suhana 8B |
| 11 | Mother Nature | Gowthami 10A |
| 12 | ಅಪ್ಪ ಅಂದ್ರೆ ಆಕಾಶ | Thilak 9B |
| 13 | ಚಿಣ್ಣರ ಚಿತ್ರ | Gopika 9B |
| 14 | ಆತ್ಮ ಕಥೆ | Ayshath Haseena 9B |
| 15 | കന്നാഡി | Jishnu PS 9C |
| 16 | ಚಿಣ್ಮರ ಚಿತ್ರ | Abdul Hasir Hussain 8A |
| 17 | പരീക്ഷാ കേ പഹല് | Mohammed Ali 10A |
| 18 | ಕಾಡು | Fathimath Saniya 9A |
| 19 | ಒಗಟುಗಳ ಸಂಗ್ರಹ | Fathimath Safana 8A |
| 20 | ರೋಗಾಣುವಿಲ್ಲದ ರೋಗ | Aneesh 9B |

| | | |
|---|---|---|
| 21 | ಸೂರ್ಯಾಸ್ತಮಾನ | Safana 8B |
| 22 | ಯೋಧ | Sanika 8B |
| 23 | ಗರುಡಗಂಬದ ದಾಸಯ್ಯ | Shravyani 9A |
| 24 | ಚಿಣ್ಮರ ಚಿತ್ರ | Badruddin 10A |
| 25 | ಥಾಮಸ್ ಅಲ್ವಾ ಎಡಿಸನ್ | Chaithra 8A |
| 26 | ನನ್ನ ಒಲವಿನ ಭಾರತ | Mohammed Zaheer 9B |
| 27 | ನಮ್ಮೂರಿನ ಹಬ್ಬ | Pushpavathi 8A |
| 28 | RAIN | Fathima Salfath 10B |
| 29 | SAVE ENVIRONMENT | Edwin Thomas 10B |
| 30 | കഡല് | Mariyammath Kashiya 9C |
| 31 | ನಮ್ಮೀ ಭಾರತ | Gopika 9B |
| 32 | ಪ್ರಕೃತಿಯಲ್ಲಿ ಗಣಿತ | Ashwini 9B |
| 33 | ಚಿಣ್ಣರ ಚಿತ್ರ | Fathimath Thabseera 10A |
| 34 | ಪ್ರಕೃತಿ | Mohammed Ifaz 9B |
| 35 | ಮಾಲಿನ್ಯ ಸಂಸ್ಕರಣೆ | Thamseerul Duwais 9B |
| 36 | ಬಿದಿರು | Aleemath Nasheera 8A |
| 37 | ಬೆಳಗುವ ಸೂರ್ಯ | Ramya 8B |
| 38 | ಬೇಸಿಗೆ ಕಾಲ | Pushpavathi 8A |
| 39 | ಮನದಲ್ಲಿರುವ ಸಂಖ್ಯೆ | Nikhitha Shetty 10A |
| 40 | ವಿದ್ಯೆ | Mohammed Farook 9A |
| 41 | ಸಂಜೆಯ ಸಮಯ | Deeksha C 8B |
| 42 | ಚಿಣ್ಣರ ಚಿತ್ರ | Mohammed Zubair 9C |

| | | |
|---|---|---|
| 43 | ಸಚಿತ್ರ ಸುದ್ದಿಗಳು | |
| 44 | ಉಪಸಂಹಾರ | |


## ಕವನ

### *ಅಂದ ಹೂ ಚಂದ ಹೂ*



ಅಂದ ಹೂ  ಚಂದ ಹೂ
ಸುಂದರವಾದ  ಹೂಗಳೇ
ಮಲ್ಲಿಗೆ ಸಂಪಿಗೆ ಗುಲಾಬಿ
ಎಲ್ಲವೂ  ಹೂಗಳು
ಅಂದ ಚಂದ  ಹೂಗಳೇ
ಸುಂದರವಾದ ಹೂಗಳೇ
ಚೆಂಡು ಹೂಗಳಿಗೆ ಕೇಸರಿ ಬಣ್ಣ
ಮಲ್ಲಿಗೆ ಹೂವಿಗೆ ಬಿಳಿ  ಬಣ್ಣ
ಹೂವೆ  ಹೂವೆ  ಹೂವೆ
ಚಂದ ಹೂ ಅಂದ ಹೂ
ಹೂಗಳೆ ಹೂಗಳೆ  ಹೂಗಳೆ
ಪರಿಮಳವಿರುವ  ಹೂಗಳೆ
ಅಂದ ಹೂ  ಚಂದ ಹೂ
ಸುಂದರವಾದ  ಹೂಗಳೆ

~~~ ಫಾತಿಮತ್ ಹರ್ಪಾನ. 9A
~~~

സ്ഥളനാമചരിത്രെ

<u>മഞ്ചേശ്വരം</u>

വ്യത്യസ്തവും അപൂർവ്വ വുവും‌മായ സാംസ്കാരിക  വ്യക്തിത്വവും ജീവിത ശൈലിയുമുള്ള ഒരു പ്രദേശമാണ് . കർണാടകയോട് ചേർന്ന് നിൽക്കുന്ന മഞ്ചേശ്വരം.  ഭാഷയിലും  വേഷത്തിലും ജിവിത  രീതിയി ലുമേല്ലാം  ഒരു  മഞ്ചേശ്വരൻ ശൈലിയുണ്ട്. സമന്വയത്തിന്റെ സമ്പന്നതയാണ് ഈ നാടിന്റെ പൈതൃകം. എല്ലാ മതങ്ങളും അനേക ജാതി  സമൂഹംങ്ങളും ഇവിടെയുണ്ട്.. കൃഷിയും കച്ചവടവും പ്രധാന തൊഴിലുകളായി ഇവിടെ നൂറ്റാണ്ടുകളായി നിൽക്കുന്നു.  പരസ്പരം കൊടുത്തും വാങ്ങിയും ജീവിക്കുന്നവരാണ് മഞ്ചേശ്വരത്തുക്കാർ.  ബഹുസ്വരതയാണ് ഈ നാടിന്റെ സൗന്ദര്യം.

സാമൂദായിക സൗഹാർദം പല രൂപത്തിൽ മഞ്ചേശ്വരം സമൂഹത്തിൽ കാണുന്നുണ്ട്.  അതിൽ ഏറ്റവും  പ്രധാനം ആരാധനാ കേന്ദ്രങ്ങൾ.തമ്മിലുള്ള ബന്ധമാണ്.  ജന വിഭാഗങ്ങൾക്കിടയിൽ പരസ്പരം നീല നിൽകുന്ന സഹ വർത്തിത്വത്തിന്റെ ജീവിക്കുന്ന അടയാള ങ്ങളായി നമുക്ക് ഉത്സവ ങ്ങളെയും ഉരുസിനെയും എടുക്കാവുന്നതാണ്.  ഈ ആഘോഷങ്ങൾ സൗഹൃദ ത്തിന്റെ മനോഹരമായ പാതയാണ് കാട്ടിത്തരുന്നത്.

സഹവർത്തിത്വത്തിലൂന്നിയ ഇത്തരം ആചാരംങ്ങളും അനുഷ്ഠാനങ്ങളും നിലനിൽക്കുന്നു എന്നതാണ് ഈ നാടിന്റെ ഏറ്റവും വലിയ മനോഹാരിത.

~~~*<u>മഹമ്മദ് നിസാർ</u>*
~~~


## ಅನುಭವ ಟಿಪ್ಪಣಿ

ಅದೊಂದು ರಜಾಕಾಲದ ಸಮಯ. ನನಗೆ ಅಜ್ಜಿ ಮನೆಗೆ ಹೋಗುವುದೆಂದರೆ ನನಗೆ ಎಲ್ಲಿಲ್ಲದ ಸಂತೋಷ. ನಾನು ನನ್ನ ತಂಗಿ ಮತ್ತು ತಂದೆ ತಾಯಿ ಅಜ್ಜಿ ಮನೆಗೆ ಪ್ರಯಾಣ ಬೆಳೆಸಿದೆವು. ನನ್ನ ಅಜ್ಜಿ ಮನೆಯ ಸೌಂದರ್ಯವನ್ನು ಸವಿಯಲು ಎರಡು ಕಣ್ಣುಗಳೂ ಸಾಲದು .ಅದೊಂದು ಸುಂದರ ಹಳ್ಳಿಯಾಗಿತ್ತು. ನನ್ನ ಅಜ್ಜಿಮನೆಯ ಸುತ್ತುಮುತ್ತಲು ಗಿಡಮರಗಳು ಕಾಣಸಿಗುತ್ತದೆ. ನನ್ನ ಮಾವ ಒಬ್ಬ ಒಳ್ಳೆಯ ಕೃಷಿಕನಾಗಿದ್ದನು. ನನ್ನ ಮಾವ ಭತ್ತದ ಕೃಷಿ, ಹಾಗೂ ಸೌತೆಕಾಯಿ ಹಾಗೂ ಇತ್ಯಾದಿ ಬೆಳೆಗಳನ್ನು ಬೆಳೆಸುತ್ತಾರೆ ಹಾಗು ಅಡಿಕೆ ತೋಟವು ಸುತ್ತಲೂ ಹರಡಿದೆ. ನನ್ನ ಅಜ್ಜಿಮನೆಯಲ್ಲಿ ಬೆಳಗ್ಗೆ ಆದರೆ ಸಾಕು ತೋಟ ಹಾಗು ಭತ್ತದ ಗದ್ದೆಯಲ್ಲಿ ನವಿಲುಗಳು ಸರಾಗವಾಗಿ ಪದ್ಯ ಹಾಡುತ್ತಾ ಗರಿಬಿಚ್ಚಿ ನಾಟ್ಯ ಮಾಡುವು ದನ್ನು ವರ್ಣಿಸಲು ಅಸಾಧ್ಯ.
ಆ ನವಿಲುಗಳ ಕೂಗಿನಿಂದ ಬೆಳಗ್ಗೆ ಎಲ್ಲರಿಗೂ ಸುಪ್ರಭಾತವಾಗುತ್ತಿತ್ತು.
ಮುಂಜಾನೆ ತೋಟಕ್ಕೆ ಹೋದರೆ ಸಾಕು ತಂಪಾದ ತಂಗಾಳಿ ಬೀಸತೊಡಗುತ್ತದೆ.

ನಮ್ಮ ಅಜ್ಜಿಮನೆಯು ಹಳೇ ಕಾಲದ ಕಟ್ಟದ ಬಹಳ ಗಟ್ಟಿಮುಟ್ಟಾದ ದೊಡ್ಡ ಹೆಂಚಿನ ಮನೆ. ನನ್ನ ಅಜ್ಜಿ ಮನೆ ಹಾಗೂ ಇತರ ಮನೆಗಳಲ್ಲಿ ಜಾನುವಾರು ಸಾಕಣೆ ಮಾಡುತ್ತಾರೆ. ಅಜ್ಜಿಮನೆ ಹಾಗು ಅನೇಕ ಮನೆಯವರು ಭತ್ತದ ಕೃಷಿ ಬೆಳೆಸುತ್ತಾರೆ. ಭತ್ತದ ಕೃಷಿ ಎಂದರೆ ಹಬ್ಬದ ಹಾಗೆ ಎಲ್ಲರೂ ಆಸಕ್ತಿಯಿಂದ ಕೃಷಿ ಮಾಡುತ್ತಾರೆ.

~~~ಮೊಹಮ್ಮದ್ ಆಫ್ರೀಸ್. 9A
~~~

**ಚಿಣ್ಣರ ಚಿತ್ರ**



~~~ ಮರಿಯಮ್ಮತ್ ಸುಹಾನ 8B

---

## MOTHER NATURE



*Mother Nature how beautiful you are!*
*With many a wonderful creatures*
*Wth lots and lots of trees, flowers,*
*Buzzing bees and butterflies.*
*Oh, how wonderful you are, Mother nature!*
*With streams and rivers, that influence our dreams,*
*Mountains and valleys and crystal clear lakes.*

*Oh! How beautiful you are Mother nature!*

~~~ ***GOWTHAMI.10A***

**ಪುಸ್ತಕಪ್ರೇಮ**

## ಅಪ್ಪ ಅಂದರೆ ಆಕಾಶ



'ಅಪ್ಪ ಅಂದರೆ ಆಕಾಶ ' ಈ ಹೆಸರಿನಲ್ಲಿಯೇ ಏನೋ ಮಾಯೆ ಇದೆ. ಈ ಪುಸ್ತಕವು ಅದೆಷ್ಟೋ ಜನರ ಮನಸ್ಸನ್ನು ಗೆದ್ದಿದೆ, ಹಾಗು ಪ್ರೀತಿ, ವಿಶ್ವಾಸವನ್ನು ಗಳಿಸಿ ಕೊಟ್ಟಿದೆ.  ಎ. ಆರ್. ಮಣಿಕಾಂತ್ ರವರ ಬರವಣಿಗೆಯಾದ ಈ ಕೃತಿಯು ಬಹಳ ಒಳ್ಳೆಯ ಹಲವು ಸಂದೇಶಗಳನ್ನೊಳಗೊಂಡಿದೆ.

ಇಂದು ಮನೆ ಮನೆಯಲ್ಲೂ ಮಕ್ಕಳಿಂದ ತಾತ್ಸಾರಕ್ಕೆ ಒಳಗಾಗುತ್ತಿರುವ ಜೀವದ ಹೆಸರು ಅಪ್ಪ - ಸ್ವಾರಸ್ಯವೇನು ಗೊತ್ತೆ ? ಮಕ್ಕಳು ಜನಿಸಿದ ಸಂದರ್ಭದಲ್ಲಿ ವಿಪರೀತ ಖುಷಿಪಡುವ ವ್ಯಕ್ತಿ ಅಪ್ಪ - ಮಕ್ಕಳು ಹುಷಾರು, ತಪ್ಪಿದಾಗ ಕಂಗಲಾಗುವ , ಚೆನ್ನಾಗಿ ಓದಿಸಿ ಸರ್ ಎನ್ನುತ್ತಾ ಶಿಕ್ಷಕರಿಗೆ ಕೈಮುಗಿಯುವ , ನನ್ನ ಮಕ್ಕಳಿಗೆ ಒಳ್ಳೆಯದು ಮಾಡಪ್ಪ ಎಂದು ದೇವರನ್ನು ಪ್ರಾರ್ಥಿಸುವ ಮಕ್ಕಳ ಭವಿಷ್ಯದ ಕುರಿತು ನೂರೆಂಟು ಕನಸು ಕಾಣುವ ವ್ಯಕ್ತಿ ಅಪ್ಪ . ಅಮ್ಮ ಜೀವ ಕೊಡುತ್ತಾಳೆ. ಅಪ್ಪ ಬಾಳು ಕೊಡುತ್ತಾನೆ. ಸಾವಿರ ಮಂದಿ ವಿರೋಧಿಗಳ ಮುಂದೆಯೂ ಅಪ್ಪ ಗುಡುಗಬಲ್ಲ. ಎಲ್ಲರೂ ಬಲ್ಲಂತೆ ಆಕಾಶದಲ್ಲಿ ಗುಡುಗು , ಮಿಂಚು  , ಸಿಡಿಲು, ಮಳೆ, ತಾರೆ, ಚಂದ್ರ, ನಕ್ಷತ್ರ, ಸೂರ್ಯ. ಈ ಎಲ್ಲವು ಇದೆ. ಆಕಾಶದಲ್ಲಿರುವ ಈ ಎಲ್ಲ ಗುಣವಿಶೇಷತೆಗಳು ಅಪ್ಪನ ವ್ಯಕ್ತಿತ್ವದಲ್ಲಿದೆ. ಈ ಕಾರಣದಿಂದಲೇ ಅಪ್ಪಅಂದ್ರೆ ಆಕಾಶ


ಇದರಲ್ಲಿ ಬಹಳ ಒಳ್ಳೆಯ ಕಥೆಗಳಿವೆ . ಹಲವು ರೋಚಕ ಹಾಗು ಮನವನ್ನು ಮುಟ್ಟುವಂತಹ ಸ್ವಾರಸ್ಯಪೂರ್ಣವಾದ ವಿಷಯಗಳು ಒಳಗೊಂಡ ಕಥೆಗಳಿವೆ . ಇದರಲ್ಲಿ ಬರುವ ಕಥೆಗಳು ಒಂದಕ್ಕಿಂತ ಒಂದು ಮನೋಹರವಾಗಿದೆ. ಈ ಕಥೆಗಳನ್ನು ಓದುವುದರಿಂದ ನಮಗೆ ಜೀವನದಲ್ಲಿ ಬದುಕಲು ಹಲವು  ಸಂದೇಶಗಳು ದೊರಕುತ್ತದೆ. ನಾವು ಜೀವನದಲ್ಲಿ ಯಾವತ್ತು ಬದುಕುವುದು ಸಹಜ ಆದರೆ ಹೇಗೆ ಬದುಕಿದೆವು

ಎಂಬುದು ಬಹಳ ಮುಖ್ಯ. ನಾವು ಮೊದಲಾಗಿ ನಮ್ಮ ಕುಟುಂಬವನ್ನು ಪ್ರೀತಿಸಬೇಕು. ಅಪ್ಪ ಅಮ್ಮನೊಂದಿಗೆ ಪ್ರೀತಿಯಿಂದ ಬದುಕಬೇಕು . ನಮಗೆ ಎಲ್ಲರಿಗೂ ಬೆಲೆ ಕಟ್ಟಲಾಗದ ವಸ್ತು ಎಂದರೆ ಅದು ಅಪ್ಪ ಅಮ್ಮ.

~~~ತಿಲಕ್. 9B

.................................................................................................

## ಚಿಣ್ಣರ ಚಿತ್ರ




*~~~ ಗೋಪಿಕ 9 ಬಿ*

.................................................................................................

## ಆತ್ಮ ಕಥೆ

ಪ್ರಿಯಮಕ್ಕಳೇ,ಯಾವುದೇ ರೀತಿಯ ಅಂಕಿಸಂಖ್ಯೆಗಳ ಪ್ರಯೋಗದಿಂದ ಮಾಡುವುದನ್ನು 'ಗಣಿತ ' ಅಥವಾ ' ಲೆಕ್ಕ ' ಎಂದು ಕರೆಯುತ್ತಾರೆ. ದೈನಂದಿನ ವ್ಯವಹಾರಗಳಲ್ಲಿ ಜನರು ನನ್ನನ್ನು ಹೆಚ್ಚಾಗಿ ಬಳಸುತ್ತಾರೆ. ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ನೌಕರಿಗಳ ಸ್ಥಳಗಳಲ್ಲಿ ನಾನು ಹೆಚ್ಚಾಗಿ ಇಂದು ಅಭಿವೃದ್ಧಿ ಹೊಂದುತ್ತಿದ್ದೇನೆ. ಎಂದು ಸಂತೋಷದಿಂದ ಹೇಳುವೆ. ಬದಲಾಗುತ್ತಿರುವ, ಆಧುನಿಕಗೊಳ್ಳುವ ಹಾಗೂ ವಿಜ್ಞಾನಮಯವಾಗಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ನನ್ನ ಜ್ಞಾನ ಎಷ್ಟು ಅವಶ್ಯಕವೆಂದು ಎಲ್ಲರಿಗೂ ಮನದಟ್ಟಾಗುವಂತೆ ಮಾಡಬೇಕು. ಆದರೆ ನಾನು ಹೆಚ್ಚು ಮಕ್ಕಳಿಗೆ ಕೈಗಟಕಲಾಗದ ಸಮಸ್ಯೆಯೂ ಆಗಿರುವೆನು. ಇದು ಒಪ್ಪಿಕೊಳ್ಳಬೇಕಾದ ಅಂಶವೇ ಅಲ್ಲವೆ ? ನನ್ನ
~~~

ಬಗ್ಗೆ ಆಸಕ್ತಿ , ಅದರ ರಚನೆ ಮತ್ತು ವಿನ್ಯಾಸಗಳನ್ನು ಪತ್ತೆ ಹಚ್ಚಿ ಪ್ರಶಂಸಾ ಮನೋಭಾವನೆ ಬೆಳೆಸಿಕೊಳ್ಳುವುದು ಮಕ್ಕಳಾದ ನಿಮಗೆ ಅತೀ ಅವಶ್ಯಕ. ನನ್ನ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳಬೇಕಾದರೆ ನಿರಂತರ ಅಭ್ಯಾಸ ಬೇಕೇ ಬೇಕು.

ನನ್ನಲ್ಲಿ 3 ವಿಭಾಗಗಳಿವೆ. 1 ಅಂಕಗಣಿತ , 2 ಬೀಜಗಣಿತ , 3 ರೇಖಾಗಣಿತ. ನನ್ನ ಕರೆಯುತ್ತಾರೆ. ಗಣಿತದಲ್ಲಿ ಕೇವಲ ಅಂಕಿ ಸಂಖ್ಯೆಗಳ ಪ್ರಯೋಗ ಮಾಡಲಾಗುತ್ತದೆ. ನನ್ನ ಒಂದು ಶಾಖೆಯಾದ ಬೀಜಗಣಿತದಲ್ಲಿ ಸಂಖ್ಯೆಗಳ ಗುಣಲಕ್ಷಣಗಳು ಮತ್ತು ಸಂಬಂಧಗಳನ್ನು ಬೀಜಾಕ್ಷರಗಳು ಮತ್ತು ಇತರ ಸಂಕೇತಗಳ ಮೂಲಕ ತಿಳಿಯಲಾಗುತ್ತದೆ.

ಬೀಜಾಕ್ಷರಗಳನ್ನು ಬಳಸಿಕೊಂಡು ಲೆಕ್ಕಾಚಾರ ಮಾಡುವುದಕ್ಕೆ ಬೀಜಗಣಿತ ಎಂದು ಕರೆಯುತ್ತಾರೆ. ನನ್ನ ಚರಿತ್ರೆ ಮುಗಿಯದ ಪುಟಗಳಂತೆ. ನನ್ನ ಮಹತ್ವವನ್ನು ತಿಳಿದವನೇ ಮುಂದೆ ತಾನೂ ಜೀವನದಲ್ಲಿಯೂ ಮಹತ್ವದ ಸ್ಥಾನವನ್ನು ಅಲಂಕರಿಸುತ್ತಾನೆ. ನನ್ನಲ್ಲಿ ಕೂಡಿಸು, ಕಳೆ, ಗುಣಿಸು, ಭಾಗಿಸು ಎಂಬೆಲ್ಲಾ ಸಾಂಕೇತಿಕ ಚಿಹ್ನೆಗಳೂ ಇವೆ. ಅಂದಮೇಲೆ ನಾನು ಅದ್ಭುತವೇ ಅಲ್ಲವೇ... ಹೇಳಿ ? ನನಗೆ ಅಂತ್ಯವಿಲ್ಲ. ರೇಖಾಗಣಿತವು ವಸ್ತುಗಳ ಅಥವಾ ಆಕೃತಿಗಳ ಗಾತ್ರ , ಆಕಾರ , ರಚನೆ , ಲಕ್ಷಣಗಳು ಮತ್ತು ಉಪಯೋಗಗಳನ್ನು ಅಧ್ಯಯನ ಮಾಡುವ ಶಾಸ್ತ್ರವೂ ಹೌದು. ನಾನು ಅಪರಿಚಿತ ಎಂಬುದನ್ನು ಹೋಗಲಾಡಿಸಿ ಪರಿಚಿತ ಎಂಬುದಕ್ಕೆ ನಾಂದಿ ಹಾಡುತ್ತೀರಲ್ಲವೇ................?

~~~ಆಯಿಶತ್ ಹಸೀನ. 9.B

.....................................................................................................

കവിത

## കണ്ണാടി




എൻ മുഖം നോക്കുമ്പോൾ
ചൊല്ലി കണ്ണാടി.....
കൈതവം കാട്ടാതെ,
ചൊല്ലി കണ്ണാടി
എന്റേയും നിന്റേയും
ചങ്ങാതി കണ്ണാടി
~~~

ഇന്ന്

ഞാൻ മുഖം നോക്കുന്നത്
മൊബൈൽ ഫോൺ സെൽഫിയിൽ
ഇത് ചൊല്ലുന്നത് കൈതവം പക്ഷേ
ഏറെ ഇഷ്ടം ഇതിനോട്......

~~~ ജിഷ്ണു.പി. എസ്:9C




~~~ ಅಬ್ದುಲ್ ಹಾಸಿರ್ ಹುಸೈನ್ 8A

परीक्षा के पहले

परीक्षा के पहले  मै डरती
कुछ कुछ लिखती इसके साथ

हर दिन माँ बाप से सुनती हूं
खेलना नहीं पढ़ना नहीं
टी.वी. देखना नहीं
मत जाओ कहीं
बहन से मत  लड़ो
अच्छी तरह पढ़ो
सकूल जाओ परीक्षा लिखो
और अच्छे अंक पाओ

~ ~ ~ मोहम्मद अली. सी. ऐ. 10A

.............................................................

## ಕಾಡು

ಕಾಡುಗಳು ಪ್ರಕೃತಿಯ ವರದಾನ
ಪ್ರಾಣಿ ಪಕ್ಷಿಗಳಿಗೆ ಆಶ್ರಯಧಾನ
ಕಾಡುಗಳೇ ಎಲ್ಲರ ಪ್ರಾಣ
ಕಾಡುಗಳಿಲ್ಲದೆ ನಾಡೇ ಇಲ್ಲ
ಕಾಡಿನ ನಮ್ಮಯ ಸಂಬಂಧ
ಬೆಳೆದಿದೆ ಎಷ್ಟೋ ಯುಗದಿಂದ
ಕಾಡುಗಳಿಲ್ಲದೆ ನಾವಿಲ್ಲ
ಕಾಡುಗಳು ಬಹು ಉಪಯೋಗಿಗಳು
ಹಣಕ್ಕಾಗಿ ಕಡಿದರೆ ಗಿಡ ಮರಗಳು
ಭವಿಷ್ಯದಲಿ ನಮಗಿದೆ ಅಪಾಯ ಕರವು
ಸುಂದರ ಹಕ್ಕಿ ವನ್ಯ ಜೀವಿಗಳು
ನೋಡಲು ಬಲು ಆಕರ್ಷಕವು
ಕಾಡುಗಳೇ ನಮ್ಮ ಜೀವನಾಡಿಗಳು
ಕಾಡುಗಳನ್ನು ಉಳಿಸುವುದೇ ಎಲ್ಲರ ಕರ್ತವ್ಯ



~~~ಫಾತಿಮತ್ ಸಾನಿಯ. 9A

........................................
~~~

# ಒಗಟುಗಳ ಸಂಗ್ರಹ

1.ನನ್ನನ್ನು ಮುಟ್ಟಿದರೆ ಕೆಟ್ಟಿರಿ ,
ರಮಿಸಿದರೆ
ನನ್ನಿಂದ ಎಲ್ಲ ಕೆಲಸವೂ ಸುಲಭ ,
ನಾನು ಹರಿಯುತ್ತೇನೆ , ನೀರಲ್ಲ.
ಕಣ್ಣಿಗೆ ಕಾಣದ ನಾನ್ಯಾರು ?

ವಿದ್ಯುತ್.

2. ಕೊಳ್ಳಿ ದೆವ್ವವಾಗಿ ಕಾಡಬಲ್ಲೆ
ನೀರೊಳಗೆ ಪ್ರಶಾಂತ ನಾನು,
ಗೊಬ್ಬರದಲ್ಲೂ ನಾನಿರುವೆ,
ಗಾಳಿಗೆದುರಾದೆನೆಂದರೆ ಬೆಂಕಿ ನಾನು
ಗುರುತಾಯ್ತೆ ನಾನ್ಯಾರೆಂಬುದು

ರಂಜಕ.

3. ನೀರು ಎಂದರೆ ಬೆಂಕಿ ನಾನು,
ಚಿಮಿಣಿ ಎಣ್ಣೆ ನನ್ನ ಗೆಳೆಯ
ನೀವು ತಿನ್ನುವ ಉಪ್ಪಿನಲ್ಲಿ
ನಾನುಂಟು ಒಗೆಯುವ ಸೋಡಾ,
ತಿನ್ನುವ ಸೋಡಾದಲ್ಲೂ ನಾನಿದ್ದೇನೆ
ನಿಮಗಿದೆಯೇ ನನ್ನ ಪರಿಚಯ ?

ಸೋಡಿಯಂ ಧಾತು

4. ನಾನು ಉರಿಯುತ್ತೇನೆ
ಚಿಮಿಣಿಯಲ್ಲ
ತೂಗಾಡಬಲ್ಲೆ, ನಿಲ್ಲಬಲ್ಲೆ
ಹೀಗಿದ್ದರೂ ನಾನು ಪರೋಪಜೀವಿ
ನಾನ್ಯಾರೆಂಬುದನು ಬಲ್ಲಿರೇನು ?

ವಿದ್ಯುತ್ ಬಲ್ಬು.

5.ಹೊರಬಿದ್ದರೆ  ನಾನು
 ನಿಮ್ಮನ್ನು  ಹೆದರಿಸುವೆ
 ಗಾಳಿಗಿಂತ ಹಗುರ
 ಬಲೂನು ಸೇರಿ ಹಾರಬಲ್ಲೆ ದೂರಕ್ಕೆ
 ಆಮ್ಲಜನಕದೊಂದಿಗೆ ಸೇರ
 ಕೊಡಬಲ್ಲೆ ನೀರು ನಾನ್ಯಾರು ?          ಹೈಡ್ರೋಜನ್ ಅನಿಲ

~~~ಫಾತಿಮತ್ ಸಫಾನ . 8A

---

## ಆರೋಗ್ಯ ಲೇಖನ

### ರೋಗಾಣು ಇಲ್ಲದೆ ರೋಗ

ಹೆಚ್ಚುತ್ತಿರುವ ಜೀವನಶೈಲಿ ರೋಗಗಳು ಮನುಷ್ಯನನ್ನು ರೋಗಿಗಳನ್ನಾಗಿಸುವುದು ಮಾತ್ರವಲ್ಲ ಮರಣಕ್ಕೂ ಕಾರಣವಾಗುತ್ತದೆ. ಇದರಲ್ಲಿ ಕೊಲೆಸ್ಟ್ರೋಲ್ ಒಂದು ಪ್ರಧಾನ ಪಾತ್ರ ವಹಿಸುತ್ತದೆ. ಕೊಲೆಸ್ಟ್ರೋಲ್ ಏಕಕಾಲದಲ್ಲಿ ಒಳ್ಳೆಯದೂ ಕೆಟ್ಟದೂ ಆಗಿದೆ. ಸಾಮಾನ್ಯ ಆಳತೆಯಲ್ಲಿ ಶರೀರಕ್ಕೆ ಅತ್ಯಗತ್ಯವಾದ ಒಂದು ಪದಾರ್ಥವಾಗಿದೆ ಕೊಲೆಸ್ಟ್ರೋಲ್. ಆದರೂ ರಕ್ತದಲ್ಲಿ ಇದರ ಸಾಂದ್ರತೆ ಹೆಚ್ಚಾದರೆ ಅದೊಂದು ನಿಶ್ಯಬ್ದ ಕೊಲೆಗಾರನಾಗುತ್ತದೆ.ಮತ್ತು ಹೃದಯಾಘಾತಕ್ಕೆ ಕಾರಣವಾಗುತ್ತದೆ. ಜೀವಿಗಳ ಕೋಶಪರೆಗಳಲ್ಲೂ ಶರೀರ ಕೋಶಗಳಲ್ಲೂ ಕಾಣಲ್ಪಡುವ ಒಂದು ರೀತಿಯ ಕೊಬ್ಬು ಆಗಿದೆ ಕೊಲೆಸ್ಟ್ರೋಲ್.  ಪಿತ್ತಜನಕಾಂಗಕ್ಕೆ ಕೊಲೆಸ್ಟ್ರೋಲ್ ನಿರ್ಮಿಸಲಿರುವ ಸಾಮರ್ಥ್ಯವಿದೆ.

ಕೊಲೆಸ್ಟ್ರೋಲ್  ಕಾರ್ಯಗಳು.

*ಕೋಶಪರೆಯ ಘಟಕವಾಗಿದೆ . ಇದು ಕೋಶಪರೆಯ ಕಾರ್ಯಗಳನ್ನು ನೆಲೆನಿಲ್ಲಿಸುತ್ತದೆ.

*ವಿದ್ಯುತ್ ಪ್ರತಿರೋಧ ಸಾಮರ್ಥ್ಯವಿರುವುದರಿಂದ ನರಗಳನ್ನು ಆವರಿಸುವುದು. ಇನ್ಸುಲೇಟರ್ಆಗಿ ವರ್ತಿಸುತ್ತದೆ.
~~~

*ಕೊಬ್ಬಿನ ಹೀರುವಿಕೆಗೆ ಸಹಾಯ ಮಾಡುವ 21 ಬಗೆಯ ಆಮ್ಲಗಳ ನಿರ್ಮಾಣಕ್ಕೆ ಕೊಲೆಸ್ಟ್ರೋಲ್ ಅಗತ್ಯವಾಗಿದೆ.

*ಕೆಲವು ಪ್ರತ್ಯೇಕ ಗ್ಲುಕೋ ಕೋರ್ಟಿಕೋಯಿಡುಗಳು, ಈಸ್ಟ್ರೋಜನ್ , ಆಂಡ್ರೋಜನ್ , ಎಂಬಿವುಗಳು ಕೊಲೆಸ್ಟ್ರೋಲ್ ಉತ್ಪಾದಿಸಲ್ಪಡುತ್ತದೆ.

*7 ಡೀಹೈಡ್ರೋ ಕೊಲೆಸ್ಟ್ರೋಲ್ನಿಂದ ವಿಟಮಿನ್ D ಉತ್ಪಾದಿಸಲ್ಪಡುತ್ತದೆ.

ರಕ್ತದಲ್ಲಿ ಕೊಲೆಸ್ಟ್ರೋಲ್ 200mg ಡೆಸಿಲಿಟರಗಿಂತ ಕಡಿಮೆಯಿರಬೇಕು.200 239 ಮಿಗ್ರಾಂ/ ಡೆಸಿಲೀಟರ್ ಹೆಚ್ಚಾದರೆ ಅಪಾಯಕಾರಿ ಮತ್ತು 240 ಮಿಗ್ರಾಂ/ ಡೆಸಿಲೀಟರಗಿಂತ ಹೆಚ್ಚಾದರೆ ಅತಂತ್ಯ ಅಪಾಯಕಾರಿಯಾಗಿದೆ.

ಧಾನ್ಯಗಳು, ಬೇಳೆಗಳು, ಕಡಲೆ, ಮುಳ್ಳುಸೌತೆ, ಬೆಂಡೆಕಾಯಿ, ಹಣ್ಣುಗಳು, ಸೋಯಬೀಜ,ಮೀನುಗಳು, ನಾರುಗಳಿರುವ ಆಹಾರವಸ್ತುಗಳು ಎಂಬಿವುಗಳು ಕೊಲೆಸ್ಟ್ರೋಲ್ ಕಡಿಮೆಮಾಡುತ್ತದೆ.

ಕೆಂಪು ಮಾಂಸ, ಪೂರ್ಣವಾಗಿ ಕೊಬ್ಬನ್ನು ಒಳಗೊಂಡಿರುವ ಹಾಲಿನ ಉತ್ಪನ್ನಗಳು, ಹೈಡ್ರಜನ್ ಉಪಯೋಗಿಸಿ ಸಂಸ್ಕರಿಸಿದ ಎಣ್ಣೆಗಳು, ಹುರಿದ ಆಹಾರವಸ್ತುಗಳು ಕೊಲೆಸ್ಟ್ರೋಲಿನ ಅಳತೆಯನ್ನು ಹೆಚ್ಚಿಸುತ್ತದೆ. ರಕ್ತದಲ್ಲಿ ಕೊಲೆಸ್ಟ್ರೋಲಿನ ಅಳತೆಯನ್ನು ಕಡಿಮೆ ಮಾಡುವ ಆಹಾರವಸ್ತುಗಳನ್ನು ಸಮೀಕೃತವಾಗಿ ಆಹಾರಕ್ರಮದಲ್ಲಿ ಒಳಗೊಳ್ಳಿಸಿದರೆ ಕೊಲೆಸ್ಟ್ರೋಲನ್ನು ನಿಯಂತ್ರಿಸಬಹುದು.

~~~ ಅನೀಶ್ .9B

........................................................................................................

## ಸೂರ್ಯಾಸ್ತಮಾನ

ಬಾನಿಂದಿಳಿದನು
ಬೆಳಗುವ ಸೂರ್ಯನು
ಸಂಜೆಯ ಸಮಯದಲಿ

ಆಡುವ ಮಕ್ಕಳ
ಬಳಗವು ಸಾಗಿತು
ಮನೆಕಡೆ ನಲಿಯುತಲಿ
~~~

ಆಹಾರವ ಹುಡುಕವ
ಹಕ್ಕಿಗಳ ಬಳಗವು
ಗೂಡುಕಡೆ ಹಾರುತಲಿ



ಕತ್ತಲು ಆಯಿತು
ಚಂದ್ರನು ಕಂಡನು
ಹರುಷದಲಿ

ಬಾವಲಿ,ಗೂಬೆಯು
ಆಹಾರ ಹುಡುಕಲು
ಹಾರಿದವು

ಬಾನಿಂದಿಳಿದನು
ಬೆಳಗುವ ಸೂರ್ಯನು
ಸಂಜೆಯ ಸಮಯದಲಿ

ಆಡುವ ಮಕ್ಕಳ
ಬಳಗವು ಸಾಗಿತು
ಮನೆಕಡೆ ನಲಿಯುತಲಿ

ಗುಡುಗು ಬಡಿಯಿತು
ಮಿಂಚು ಹೊಳೆಯುತ
ಬಂತು ಮಳೆ ಸುರಿಸುರಿಯುತಾ.....
ಹಕ್ಕಿಗಳೆಲ್ಲಾವು ತಮ್ಮ ಬಳವನ್ನು ಸೇರಿದವು..... ಸಘಾನ. **8B**

,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,

ಲೇಖನ

## ಯೋಧ

*ವೀರ ಜವಾನರು ನಮ್ಮ ದೇಶದವರು. ಚಳಿ, ಮಳೆ, ಸೆಖೆಯೆನ್ನದೆ, ಹಗಲು ಇರುಳೆನ್ನದೆ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ವಿಶಾಲ ಭಾರತವನ್ನು ಕಣ್ಣಲ್ಲಿ ಕಣ್ಣಿಟ್ಟು ದುಷ್ಟರಿಂದ



ಕಾಯುವ ನಮ್ಮ ದೇಶದ ಸೈನಿಕರು ಪರಾಕ್ರಮಿಗಳು, ಪ್ರಪಂಚದಲ್ಲೇ ಅಗ್ರಗಣ್ಯರು, ಭಾರತ ಮಾತೆಯ ಹೆಮ್ಮೆಯ ಮಕ್ಕಳು.

ಮಳೆಯೇ ಇರಲಿ, ಬಿಸಿಲೇ ಬರಲಿ, ಶತ್ರುಗಳ ಗುಂಡಿನ ಧಾಳಿಯೇ ಬರಲಿ ಹಿಂಜರಿಯುವುದಿಲ್ಲ. ಅವರೇ ನಮ್ಮ ಈ ಧೀರರು. ಕುಟುಂಬವನ್ನು ಮರೆತು ಮನೆಯನ್ನೂ ಕೂಡ ಬಿಟ್ಟು ಬಾಳುವರು ಯೋಧರು ದೇಶವನ್ನು ನೆನೆದು. ಎಲ್ಲಾ ಮನೆಯ ಎಲ್ಲಾ ಮೂಲೆಯಲ್ಲಿಯೂ ಸದಾ ಜೀವಿಸುತ್ತಿರುವ ಏಕೈಕ ಜೀವವೇ ಯೋಧ. ಯೋಧರು ದೇಶದ ಬೆನ್ನೆಲುಬು. ಒಗ್ಗಟ್ಟಿಗೆ ನಾಂದಿಯಾಡುವ ಏಕೈಕ ತಂಡವೆಂದರೆ ಸೇನಾಪಡೆ. ಸೇನೆಯು ದೇಶದ ಬೆಳವಣಿಗೆಗೆ ಕಾರಣವೆಂದರೆ ಯಾರಿಗೂ ತಿಳಿಯದು. ಸೇನೆಯಿರುವುದರಿಂದಾಗಿ ನಾವು ಜೀವಂತವಾಗಿದ್ದೇವೆ..

ಜೈ ಜವಾನ್ ಜೈ ಕಿಸಾನ್.

~~ **ಸಾನಿಕ. 8 ಬಿ**

.............................................................................................


## ಪುಸ್ತಕ ಪ್ರೇಮ

### <u>ಗರುಡಗಂಬದ ದಾಸಯ್ಯ</u>

ನನಗೆ ಸಿಕ್ಕಿದ್ದು 'ಗರುಡ ಗಂಬದ ದಾಸಯ್ಯ' ಎಂಬ ಪುಸ್ತಕ.ಇದನ್ನು 'ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು' ಬರೆದಿದ್ದಾರೆ. ನನಗೆ ಈ ಪುಸ್ತಕವು ತುಂಬಾ ಇಷ್ಟವಾಗಿದೆ. ಯಾಕೆಂದರೆ ಅವರು ತಮ್ಮ ಊರಿನಲ್ಲಿ ನಡೆದ ಘಟನೆಗಳು ಹಾಗೂ ಸುಂದರವಾದ ಆ ಹಳ್ಳಿಯನ್ನು ವರ್ಣಿಸಿದ್ದನ್ನು ಚೆನ್ನಾಗಿ ಬರೆದಿದ್ದಾರೆ. ಅವರು ಊರಿನಲ್ಲಿ ನಡೆಯುವ ಹಬ್ಬಗಳನ್ನು,ಅಲ್ಲಿಯ ಗುರುಹಿರಿಯರ ಬಗ್ಗೆ ತಿಳಿಸಿದ್ದಾರೆ.ಅದ್ದರಿಂದ ನಮಗೆ ಅವರ ಊರಲ್ಲಿ ನಡೆದ ಆಚಾರ ವಿಚಾರಗಳು ತಿಳಿದು ಬಂತು. ಈ ಪುಸ್ತಕವು ಮಕ್ಕಳಿಗೆ ಆನಂದ ನೀಡುತ್ತದೆ. ನನಗೆ ಈ ಪುಸ್ತಕದಲ್ಲಿ ಮನಮುಟ್ಟಿದ ಲೇಖನವೆಂದರೆ 'ಜಾತ್ರೆ' ಯಾಕೆಂದರೆ ಗೊರೂರಲ್ಲಿ ಜಾತ್ರೆಯ ಸಂಭ್ರಮ,ರೀತಿ ನೀತಿ ಮತ್ತು ಇನ್ನೊಂದು ಲೇಖನ 'ನಮ್ಮೂರಿನ ರಸಿಕರು' ಒಂದು ಹಾಸ್ಯಲೇಖನವು ಆಗಿದೆ. ಇನ್ನೂ ಇಂತಹ ಕಥೆ ಲೇಖನಗಳನ್ನು ಓದಬೇಕೆನಿಸಿತು.

ಈ ಪುಸ್ತಕದಿಂದ ಹಲವಾರು ಮಾಹಿತಿಗಳನ್ನು ತಿಳಿದೆನು. ಈ ವಿಶ್ವದಲ್ಲಿ ಎಷ್ಟೋ ದೇಶಗಳಿವೆ, ಅದೆಷ್ಟೋ ರಾಜ್ಯಗಳಿವೆ. ಅದರಲ್ಲಿ ನಮ್ಮ ಭಾರತವು ಒಂದಾಗಿದೆ.ಇಂತಹ ಲೇಖಕರು, ಕವನಗಾರರು ನಮ್ಮೀ ಭಾರತದ ಹಿರಿಮೆಗಳನ್ನು ಎತ್ತಿ ಹಿಡಿಯುತ್ತಿದ್ದಾರೆ. ಲೇಖಕರು ಒಂದು ಸಣ್ಣ ಹಳ್ಳಿಯಲ್ಲಿ ನಡೆಯುವ ಹಬ್ಬವನ್ನು ತಿಳಿಸುತ್ತಾರೆ. ಅಲ್ಲಿಗೆ ನಮಗೆ ಹೋಗಲು ಸಾಧ್ಯವಾಗದಿದ್ದರೂ,ಇಂತಹ ಲೇಖನಗಳಿಂದ ತಿಳಿಸುತ್ತಾರೆ. ನಾವು ಆ ಜಾತ್ರೆಗೆ ಹೋಗಿ ಪಾಲ್ಗೊಂಡು, ಪೂರ್ವಜರಲ್ಲಿ ಇಂತಹ ಆಚರಣೆಗಳ ಕುರಿತು ಕೇಳಬೇಕೆಂದು ಅನಿಸಿತು. ಈಗಿನ ಕಾಲಘಟ್ಟದಲ್ಲಿ  ಇಂತಹ ಹಬ್ಬಗಳು ಮರೆಯಾಗುತ್ತಿವೆ.


~~~ ಶ್ರಾವ್ಯಾಣಿ 9A




ಬದ್ರುದ್ದೀನ್ 10 ಎ
~~~

# ಥಾಮಸ್ ಆಲ್ವಾ ಎಡಿಸನ್

ಇದು ೧೯೧೪ ರಲ್ಲಿ ನಡೆದ ಘಟನೆ . ವಿಜ್ಞಾನ ಮೇಧಾವಿ ಥಾಮಸ್ ಆಲ್ವಾ ಎಡಿಸನ್ ಅವರ ಸಂಶೋಧನೆಯ ಉಪಕರಣಗಳು ಹಾಗೂ ಕಡತಗಳು ಭಯಂಕರ ಬೆಂಕಿ ಅನಾಹುತಕ್ಕೆ ಈಡಾಗಿ ಉರಿಯುತ್ತಿದ್ದವು. ಬೆಂಕಿಯ ಜ್ವಾಲೆ ಆಕಾಶದೆತ್ತರಕ್ಕೆ ಹಬ್ಬಿತ್ತು. ತನ್ನ ಕನಸುಗಳೆಲ್ಲವೂ ಆ ಅಗ್ನಿಜ್ವಾಲೆಯಲ್ಲಿ ನಾಶವಾಗುತ್ತಿರುವುದನ್ನು ನೋಡುತ್ತಾ ಹಾಗೆಯೇ ನಿಂತು ಬಿಟ್ಟಿದ್ದರು. ಪಕ್ಕದಲ್ಲಿಯೇ ನಿಂತಿದ್ದ ಅವರ ಮಗ ಭಯಂಕರ ಬೆಂಕಿ ಅಪಘಾತವನ್ನು ನೋಡುತ್ತ ಹಾಗೆಯೇ ಭಯ ಭೀತನಾಗಿದ್ದ. ಎಡಿಸನ್ ಮಗನನ್ನು ನೋಡಿ ಹೇಳಿದರು. ಏನು ನೋಡುತ್ತಿದ್ದೀಯಾ? ಹೋಗು , ನಿಮ್ಮ ಅಮ್ಮನ್ನು ಕರೆದುಕೊಂಡು ಬಾ, ಜೀವನದಲ್ಲಿ ಇನ್ನು ಇಂತಹ ಒಂದು ದೃಶ್ಯ ನೋಡಲು ಮುಂದೆಂದೂ ಅವಕಾಶ ದೊರೆಯದು 'ಎಂದರು..



ಆ ಬೆಂಕಿ ಅಪಘಾತವನ್ನು ನೋಡಿದ ಎಡಿಸನ್ ಅವರ ಹೆಂಡತಿ 'ಈ ಸಂಶೋಧನಾಲಯದಲ್ಲಿ ಇಪ್ಪತ್ತು ಲಕ್ಷ ಡಾಲರ್ ಬೆಲೆಯ ಯಂತ್ರಗಳು ಇದ್ದುವಲ್ಲವೆ ನೀವು ಜೀವನವಿಡೀ ಕಷ್ಟಪಟ್ಟು ಸೇರಿಸಿದ್ದ ಎಲ್ಲ ಸಂಶೋಧನೆಗಳ ಪ್ರತಿಫಲಗಳು, ಅವುಗಳಿಗೆ ಸಂಬಂಧಿಸಿದ ಕಾಗದ ಪತ್ರಗಳು ಇಲ್ಲಿಯೇ ಅಲ್ಲವೆ ಇದ್ದದ್ದು! ಅಯ್ಯೋ ಈಗೇನು ಮಾಡುವುದು 'ಎಂದು ಪ್ರಲಾಪಿಸಿದಳು.

ಅದಕ್ಕೆ ಎಡಿಸನ್ ಬಹಳ ತಾಳ್ಮೆಯಿಂದ ಹೇಳಿದರು 'ನಮ್ಮೆಲ್ಲರ ತಪ್ಪುಗಳೆಲ್ಲವು ಈ ಬೆಂಕಿಯಲ್ಲಿ ಸುಟ್ಟು ಕರಕಲಾಗುತ್ತಿವೆ! ಅದಕ್ಕಾಗಿ ದೇವರಿಗೆ ಮೊದಲು ಕೃತಜ್ಞತೆ ಹೇಳು. ಇನ್ನು ನಾವು ಮೂಲಪ್ರತಿಗಳಿಂದ ನಮ್ಮ ಕೆಲಸವನ್ನು ಮೊದಲು ಮಾಡೋಣ . ಯಾವುದೇ ನಷ್ಟ ಬಂದರೂ ಅದು ಏನಾದರೊಂದು ಲಾಭವನ್ನು ತನ್ನಲ್ಲಿರಿಸಿಕೊಂಡೇ ಬರುತ್ತದೆ ಎಂದರು.

ಆ ದುಃಖದಲ್ಲಿಯೂ ತಾಳ್ಮೆಯಿಂದ ಎಡಿಸನ್ ದಂಪತಿಗಳು ಯಾವುದೂ ತಮಗೆ ಸಂಭಂದವಲ್ಲವೆಂಬಂತೆ ಆ ಬೆಂಕಿ ಅಪಘಾತವನ್ನು ತಮಾಷೆಯಿಂದ ನೋಡುತ್ತಾ ನಿಂತರು!

~~~ ಚೈತ್ರಾ. 8A
~~~

# ನನ್ನ ಒಲವಿನ  ಭಾರತ

ಭಾರತಾಂಬೆಯ ಮಕ್ಕಳೇ ಬನ್ನಿ
ಪ್ರಕೃತಿ ಸುತ್ತೋಣ
ಭಾರತಾಂಬೆಯ ಸೌಂದರ್ಯವ
ಸುಖದಿ ಸವಿಯೋಣ
ಮಳೆಯ ನೀರಿನಲ್ಲಿ
ಬಣ್ಣದ ದೋಣಿ ಬಿಡೋಣ……………

ಮಾವಿನ ತೋಟಕ್ಕೆ ಹೋಗಿ
ಮಾವಿನ ಕಾಯಿ ಸವಿಯೋಣ
ಹಲಸಿನ ಹಣ್ಣನ್ನು ಕೊಯ್ದು
ಬಗೆ ಬಗೆಯ ತಿಂಡಿಯ ಮಾಡೋಣ

ಕಲರವ ಕೂಡಿದ ಪಕ್ಷಿಗಳ ಸೊಬಗಿಗೆ
ಜಿಗಿ ಜಿಗಿದು ಕುಣಿಯೋಣ
ರಭಸದಿ ಓಡುವ ಪ್ರಾಣಿಗೆ
ಗೆಲುವಿನ ಹಾದಿಯ ತೋರಿಸೋಣ
ಸುಗಂಧದ ಸಂಪಿಗೆ ಕೊಯ್ದು
ಹೂ ಮಾಲೆ ಮುಡಿಗೇರಿಸೋಣ



ಸಮಾನ ದೃಷ್ಟಿಯಲಿ ಸಾಗೋಣ
ಗೆಳೆತನದ ಸಂಬಂಧ ತಿಳಿಸೋಣ
ಎಲ್ಲರ ಒಳಿತಿಗೆ ಮುಂದಾಗೋಣ

~~~ಮಹಮ್ಮದ್ ಝುಹೇರ್ 9B
~~~

ಊರಹಬ್ಬ

# ನಮ್ಮೂರಿನ ಹಬ್ಬ

ನಮ್ಮೂರಿನ ಗದಗ ಜಿಲ್ಲೆಯ ರೋಮ ತಾಲೂಕಿನ ಕರಮುಡಿ ಎಂಬ ಸಣ್ಣ ಗ್ರಾಮ.ನಾನು ಹುಟ್ಟಿ ಬೆಳೆದದ್ದು ಅಲ್ಲಿಯೇ. ನಮ್ಮೂರಿನಲ್ಲಿ ಹಲವು ತರದ ಹಬ್ಬಗಳನ್ನು ಆಚರಿಸುತ್ತಾರೆ. ವರ್ಷಕ್ಕೊಮ್ಮೆ ಹನುಮ ಜಯಂತಿ ಜಾತ್ರೆ ನಡೆಯುತ್ತದೆ. ಆಗ ಎಲ್ಲರೂ ಒಟ್ಟಾಗಿ ಸೇರುತ್ತಾರೆ. ಎಲ್ಲರಿಗೂ ಸಂಭ್ರಮವೇ ಸಂಭ್ರಮ. ಸಂಜೆ ವೇಳೆಯಲ್ಲಿ ರಥವನ್ನು ಎಳೆಯುತ್ತಾರೆ. ಒಂದು ವಿಶೇಷವೆಂದರೆ ಈ ಹನುಮ ಜಯಂತಿ ರಥವನ್ನು ೧೦೧ ಊರಲ್ಲಿ ಆಚರಿಸುತ್ತಾರೆ. ಕೊನೆಯ ರಥವನ್ನು ನಮ್ಮೂರಿನಲ್ಲಿ ಎಳೆಯುತ್ತಾರೆ.

ಜಾತ್ರೆಯು ಮುಗಿದ ಮೇಲೆ ಮರುದಿನ ಮಂಗಳವಾರ ಅಥವಾ ಶುಕ್ರವಾರ ‘ವಾರ’ ಹಿಡಿಯುತ್ತಾರೆ. ವಾರವೆಂದರೆ ನಮ್ಮೂರಿನಲ್ಲಿರುವ ಎಲ್ಲಾ ಗುಡಿಗಳಿಗೆ ಮುಂಜಾನೆ ಬೇಗನೆ ಎದ್ದು ತಲೆಗೆ ಸ್ನಾನ ಮಾಡಿ ಗುಡಿಗಳಿಗೆ ನೀರು ಹಾಕುತ್ತಾರೆ. ನಂತರ ಮನೆಯ ಹೆಣ್ಣು ಮಕ್ಕಳು ಎಲ್ಲಾ ಗುಡಿಗಳಿಗೂ ದೀಪ ಹಚ್ಚಲು ಹೋಗುತ್ತಾರೆ. ಹೀಗೆ ೫ ವಾರ ಅಂದರೆ ಮಂಗಳವಾರ, ಶುಕ್ರವಾರ ಮಾತ್ರ ಮಾಡುತ್ತಾರೆ. ಕಡೆ ದಿನ ಎಂದಿನಂತೆ ನೀರು ಹಾಕಿ, ದೀಪ ಹಚ್ಚುತ್ತಾರೆ. ಸಂಜೆ ಎಲ್ಲಾ ಹೆಂಗಸರು ಸುಂದರವಾಗಿ ತಯಾರಾಗಿ ಎಲ್ಲಾ ಗುಡಿಗಳಿಗು ಒಂದು ಎಲೆಯಲ್ಲಿ ಅಡಿಕೆ, ನೆನೆದು ತಂದ ಕಡಲೆ, ಅರಶಿನದ ಕೊಂಬು, ಒಣಗಿದ ಖರ್ಜೂರ ಹಾಗೂ ಒಂದು ಬಟ್ಟಲಿನಲ್ಲಿ ಮನೆಯಲ್ಲಿ ಮಾಡಿದ ಸಿಹಿಗಳನ್ನು ಅದರಲ್ಲಿ ಇಡಬೇಕು. ಎಲ್ಲಾ ಮನೆಗಳಲ್ಲಿ ಬದನೆಕಾಯಿ ಪಲ್ಯ ಇಡಬೇಕು. ಅದು ನಮ್ಮೂರಿನಲ್ಲಿ ‘ಕಾಯಂ’ ಆಗಿದೆ. ನೋಡಲು ಎರಡು ಕಣ್ಣು ಸಾಲದು. ಇದೊಂದು ನಮ್ಮೂರಿನ ಹಬ್ಬದ ವಿಶೇಷತೆಯಾಗಿದೆ. ಹೀಗೆ ಹಿರಿಯರು ಹಲವು ತರದ ಹಬ್ಬಗಳನ್ನು ಆಚರಿಸುತ್ತಿದ್ದರು.

~~~ಪುಷ್ಪಾವತಿ.8A
~~~

## RAIN

Rain, rain come again!
I want to dance again,
Children fall and cry again,
Rain, rain come again!
Rain, rain come again!
Children want to play in rain,
People want to sing in rain,
Rain, rain come again!



~~~FATHIMA SALFATH. 10B

.........................................................................................S

## SAVE ENVIRONMENT SAVE LIFE

The surroundings in which we live is called environment. Everywhere there are boards, keep your surroundings clean. Do not throw away garbage in the public places. This does not affect the people. Most of us do not mind these boards. They continue their habits of throwing wastes into the environment. Now plastic waste has completely ruined the earth. Plants cannot grow where plastic is mixed with the soil. The rapid industrialization and urbanization resulted in environment pollution.

There should be ecological balance in the environment. Plants and animals bring about a balance in the nature. Plants provide us timber, materials for shelter and medicine. Some animals provide us food manure and milk. They are the agents of keeping the environment clean. Animals and plants must be protected. Save our environment.

~~~ EDWIN THOMAS. 10B

.............................................................................................

# കട

കടൽ

അമ്മയെ പ്പോലെയാണ്

തന്നിലുള്ളതും തനിക്കുള്ളതും

മക്കൾക്കായ് പകർന്നുനൽകും കടൽ

ദാര്യയെപ്പോലെയാണ്

ശാന്തമായി ഉറങ്ങു തിനിടയ്ക്ക്

മുന്നറിയിപ്പൊന്നും ഇല്ലാതെയാണ്

കോടുങ്കാറ്റായി വിശുക കടൽ

സുഹൃത്തിനെപ്പോലെയാണ്



അന്ധകാരത്തിന്റെ ആഴങ്ങളിലേക്ക്

മയങ്ങി വീ ഴുമ്പോഴേകം

ഒരു ജല സ്പർശമായി അരി കിലെത്തും

വിളിച്ചുണർത്താൻ കടൽ

കാമുകിയെപ്പോലെയാണ്

പിരിയണമെന്നാശിക്കുമ്പൊഴെല്ലാം

കൂടുതൽ ശക്തി യോടെ വലിച്ചടുപ്പിക്കും.

ഏകാന്തതയിൽ

ചില പ്പോഴൊക്കെ കടൽ

എന്നെപ്പോലെയാകാറുണ്ട്

പ്രതിക്ഷയുടെ ഒരു നാമ്പു പോലുമില്ലാതെ

പരന്നു കിട ക്കുന്നു അറ്റ മില്ലാതെ. ~~~മരിയമത് കാഷി യ.9C

# ನಮ್ಮೀ ಭಾರತ

ಬನ್ನಿರಿ ಮಕ್ಕಳೇ ನಾವೆಲ್ಲ
ಒಂದಾಗಿ ಬಾಳೋಣ
ಒಗ್ಗಟ್ಟಿನಿಂದ ನಾವೆಲ್ಲ
ಖುಷಿಯ ಕಾಣೋಣ

ದೇಶಕ್ಕಾಗಿ ಹೋರಾಡುತ
ಒಳಿತಿಗಾಗಿ ಕಾದಾಡುವ
ಭಾರತಾಂಬೆಯ ಮಕ್ಕಳು ನಾವು
ಒಗ್ಗಟ್ಟನ್ನೇ ಬಯಸೋಣ

ದೇಶದ ಸಂಸ್ಕೃತಿ ಉಳಿಸೋಣ
ದೇಶದ ಕೀರ್ತಿಯ ಹೆಚ್ಚಿಸೋಣ
ಗಾಂಧಿ, ತಿಲಕ, ಬೋಸರ
ಸೇವೆಯ ಮೆಚ್ಚೋಣ

ದೇಶಕ್ಕಾಗಿ ಒಂದಾಗುವ
ದೇಶ ಸೇವೆಯ ಮಾಡುತಲಿ
ಬೇಧ ಭಾವಗಳ ಮರೆಯುವ
ನಾವೆಲ್ಲರೂ ಒಂದೇ

ನಮ್ಮ ಪ್ರಾಣವ ದೇಶಕ್ಕಾಗಿ
ಎಂದಿಗೂ ಪಣವಿಡೋಣ
ನಮ್ಮ ದೇಶ ಭಾರತ
ಎಂದು ಸಾರಿ ಹೇಳೋಣ

~~~ ಗೋಪಿಕ. 9B

.........................................................................................
~~~

# ಪ್ರಕೃತಿಯಲ್ಲಿ ಗಣಿತ

ನನ್ನ ಜೀವನದ ಪ್ರತಿಯೊಂದು ಹಜ್ಜೆಗಳಲ್ಲಿಯೂ ಗಣಿತವಿರುವುದು. ಹಾಗೆಯೇ ಪ್ರಕೃತಿಯೂ ಕೂಡ ತನ್ನ ಪ್ರತಿಯೊಂದು ನಿರ್ಮಿತಿಯಲ್ಲೂ ಗಣಿತದ ಹಲವಾರು ಆಶಯಗಳನ್ನು ಬೆಸೆದಿರುವುದನ್ನುಕಾಣಬಹುದು. ಉದಾಹರಣೆಗೆ ಜೇನು ನೊಣವು ತನ್ನ ಸುಂದರವಾದ ಗೂಡನ್ನು ಸಮಷಡ್ಭುಜಾಕೃತಿಯಲ್ಲಿನಿರ್ಮಿಸುವುದು. ಅದೇ ರೀತಿ ಮರದ ಗೆಲ್ಲುಗಳು ವಿವಿಧ ಅಳತೆಯ ಕೋನಗಳನ್ನು ತಮ್ಮೊಳಗೆ ನಿರ್ಮಿಸಿ ಚಿಗುರೊಡೆಯುವುದು. ಮಾತ್ರವಲ್ಲದೆ ಬಹುಪಯೋಗಿ ಬಾಳೆಗಿಡವನ್ನು ತೆಗೆದು ಸೂಕ್ಷ್ಮವಾಗಿ ಗಮನಿಸಿದರೆ ಅದರ ಎಲೆಗಳಲ್ಲಿ ಸಮಾನಾಂತರ ರೇಖೆಗಳನ್ನು ಕಾಣಬಹುದು. ಹೀಗೆ ಒಂದೆರಡು ಅಲ್ಲ ಹಲವು ಪುಷ್ಪಗಳಲ್ಲಿ ಮತ್ತು ಹಣ್ಣುಗಳಲ್ಲಿ ಹಲವು ಆಕೃತಿಗಳನ್ನೂ ಕಾಣಬಹುದು. ಇವುಗಳಲ್ಲಿ ಬೆಂಡೆಕಾಯಿ ನಿತ್ಯಪುಷ್ಪ ಇವೆಲ್ಲವೂ ಕೇವಲ ಕೆಲವೇ ಉದಾಹರಣೆಗಳು.

\~~~ಅಶ್ವಿನಿ. 9B




\~~~

\~~~Fathimath Thabseera 10A

ಕವನ

## ಪ್ರಕೃತಿ

ಸುತ್ತಲು ಕಾಣುವ ಈ ಪ್ರಕೃತಿ
ದೇವರ ಕಲಾಕೃತಿ
ಪ್ರಕೃತಿಯ ಚಂದ
ಕೊಡುವುದು ಮನಸ್ಸಿಗೆ ಆನಂದ
ಹೂವು ಹಣ್ಣುಗಳಿಂದ ತುಂಬಿದ ಪ್ರಕೃತಿ
ನೋಡಲು ತುಂಬ ಚಂದ
ಹಾರುವ ಹಕ್ಕಿಗಳಿಂದ ತುಂಬಿದ ಪ್ರಕೃತಿ
ನೋಡಲು ತುಂಬ ಅಂದ
ಜೀವನದ ದುಃಖವನು ಅಳಿಸುತ್ತಾ
ಮನದಲ್ಲಿ ಹರುಷವ ತರಿಸುತ್ತಾ
ಈ ಭೂಮಿಯ ಚೆಲುವನು ಹೆಚ್ಚಿಸುತ್ತಾ
ಪ್ರಾಣಿ ಪಕ್ಷಿಗಳಿಗೆ ಆಶ್ರಯವನ್ನು ನೀಡುತ್ತಾ
ಈ ಸುಂದರ ನದಿಯು ಮುಂದುವರಿದು
ಕೊನೆಗೆ ಸೇರುತಿದೆ ಸಮುದ್ರವನು.



~~~ ಮೊಹಮ್ಮದ್ ಇಫಾರ್ಝ್.9B

.........................................................................................

ಪರಿಸರ ಪ್ರೀತಿ

## ಮಾಲಿನ್ಯ ಸಂಸ್ಕರಣೆ

ಪರಿಸರವೆಂದರೆ ನಮ್ಮ ಸುತ್ತುಮುತ್ತಲೂ ಇರುವ ನದಿ, ಪರ್ವತ, ಸಸ್ಯ, ಪ್ರಾಣಿ, ಪಕ್ಷಿ, ಬಯಲು, ಸಮುದ್ರ ಮುಂತಾದವುಗಳಾಗಿವೆ. ಆರ್ಥಿಕ ಪರಿಸರ ಹಾಗೂ ಭೌಗೋಳಿಕ ಪರಿಸರ ಎಂಬಿವುಗಳು ಪರಿಸರದಲ್ಲಿ ಒಳಗೊಳ್ಳುತ್ತದೆ. ಪರಿಸರದ ಅಧ್ಯಯನದಿಂದ ಅದರ ಮಹತ್ವ ಹಾಗೂ ರಕ್ಷಣೆಯ ಬಗ್ಗೆ ತಿಳಿದು ಕೊಳ್ಳಬಹುದು.

ನಮ್ಮ ದೇಶದಲ್ಲಿ ಮಾಲಿನ್ಯ ದಿನೇ ದಿನೇ ಹೆಚ್ಚುತ್ತಲೇ ಹೋಗುತ್ತದೆ. ಜಲ, ವಾಯು, ಮಣ್ಣು ಮಾಲಿನ್ಯವು ಇದರಲ್ಲಿ ಒಳಗೊಂಡಿದೆ. ಮಾಲಿನ್ಯದಲ್ಲಿ ಪ್ರಧಾನವಾದುದು ಪ್ಲಾಸ್ಟಿಕ್. ಪ್ಲಾಸ್ಟಿಕ್ ನಿಂದ ಹಲವಾರು ತೊಂದರೆಗಳಿವೆ. ಪ್ಲಾಸ್ಟಿಕ್ ಹಾಗೂ ತ್ಯಾಜ್ಯ ವಸ್ತುಗಳಿಂದ
~~~

ಜಲಮಾಲಿನ್ಯವಾಗುತ್ತದೆ. ವಾಹನಗಳ ಹೊಗೆಯಿಂದ ಹಾಗೂ ಕಾರ್ಖಾನೆಯಿಂದ ಹೊರಸೂಸುವ ಹೊಗೆಯಿಂದ ವಾಯು ಮಾಲಿನ್ಯ ಉಂಟಾಗುತ್ತದೆ. ನಾವು ಪ್ಲಾಸ್ಟಿಕನ್ನು ಎಲ್ಲೆಂದರಲ್ಲಿ ಬಿಸಾಡಿದರೆ ಮಳೆ ಬಂದಾಗ ನೀರು ಇಂಗುವಿಕೆಗೆ ಅಡ್ಡಿಯಾಗುತ್ತದೆ. ಮಾಲಿನ್ಯಗಳಲ್ಲಿ ಶಬ್ದಮಾಲಿನ್ಯ, ಪರಿಸರಮಾಲಿನ್ಯ, ಶಬ್ದಮಾಲಿನ್ಯ ಎಂಬ ಮೂರು ರೀತಿಯ ಮಾಲಿನ್ಯಗಳಿವೆ.ಇದರಿಂದಲೇ ಪರಿಸರವು ಇನ್ನಷ್ಟು ಮಾಲಿನ್ಯವಾಗುತ್ತದೆ. ಪ್ಲಾಸ್ಟಿಕ್ ನೀರಿನೊಂದಿಗೆ ಕೂಡಿ ಜಲ ಮಾಲಿನ್ಯವನ್ನುಂಟುಮಾಡುತ್ತದೆ.

ಇದಕ್ಕೆ ಪರಿಹಾರವೇನೆಂದರೆ ಆದಷ್ಟು ಪ್ಲಾಸ್ಟಿಕನ್ನು ಮಿತಬಳಕೆ ಮಾಡಬೇಕು. ಹೆಚ್ಚಾಗಿ ಚೀಲಗಳನ್ನು ಉಪಯೇಗಿಸಬೇಕು. ವಿಷಾನಿಲ ಬಿಡುವ ಕಾರ್ಖಾನೆಗಳು ಮುಚ್ಚುವಂತಾಗಬೇಕು. ವಿಷದಿಂದ ಕೂಡಿದ ನೀರನ್ನು ಶೋಧಿಸಿ ನದಿಗಳಿಗೆ ಬಿಡಬೇಕು. ಶಬ್ದಮಾಲಿನ್ಯವನ್ನು ತಡೆಗಟ್ಟಬೇಕು. ಮುಖ್ಯವಾಗಿ ಎಲ್ಲ ಜನರಿಗೆ ಪರಿಸರ ಶುದ್ಧವಾಗಿರುವಂತೆ ನೊಡಿಕೊಳ್ಳುವ ಕಾಳಜಿ ಇರಬೇಕು. ನಮ್ಮ ಮನೆಯ ಸುತ್ತಲೂ ಸುಂದರ ಸ್ವಚ್ಛ ವಾತಾವರಣ ಇರಬೇಕು. ಆದಷ್ಟು ಗಿಡಗಳನ್ನು ನೆಟ್ಟು ಭೂಮಿ ತಂಪಾಗಿರುವಂತೆ ಮಾಡಬೇಕು.ಆಗ ಮಾತ್ರ ಮಳೆ ಹೆಚ್ಚಾಗಿ ಶಾಂತಿ ಸಮಾಧಾನದ ಜೀವನವನ್ನು ನಡೆಸಲು ಸಾಧ್ಯವಿದೆ. ಪರಿಸರ ಸಂರಕ್ಷಣೆ ಇಂದಿನ ನಾಗರಿಕರ ಮೊದಲ ಕರ್ತವ್ಯವಾಗಿದೆ.ಇದನ್ನು ಮಾನವರಾದ ನಾವು ಅರಿತುಕೊಳ್ಳಬೇಕು.

~~~ತಂಸೀರುಲ್ ದುವೈಸ್ 9B

........................................................................................

ಕವನ

## ಬಿದಿರು

ಬಿದಿರಾಗಿ ಬೆಳೆದೆ
ಯಂತ್ರದಿ ಸವೆದೆ
ರಾಸಾಯನಿಕಗಳೊಂದಿಗೆ
ಕುದಿ ಕುದಿದು
ಪಲ್ಪು ನಾನಾದೆ
ಯಂತ್ರದಿ ಮತ್ತೆ ಮೆತ್ತಗಾದೆ
ನಗುಮುಖ ಹೊತ್ತು
ಪೆನ್ನಿನ ಒಡನಾಟ ಬಯಸಿದೆ..



~~~ಅಲಿಮತ್ ನಶೀರ .8A

ಕವನ

# ಬೆಳಗುವ ಸೂರ್ಯ



ಬಾನಿಂದಿಳಿದನು
ಬೆಳಗುವ ಸೂರ್ಯನು
ಸಂಜೆಯ ಸಮಯದಲ್ಲಿ ll

ಆಡುತ ಮಕ್ಕಳ
ಬಳಗವು ಸಾಗಿತು
ಮನೆಕಡೆ ನಡೆಯುತಲಿ ll

ಹಕ್ಕಿಯ ಬಳಗವು
ಹಾರುವ ಬಾನಲಿ
ತೆರಳಿತು ರಭಸದಲಿ ll

ಮೇಯಲು ಹೋದ
ದನಗಳ ಗುಂಪು
ಕೂಡಿತು ಹಟ್ಟಿಯಲ್ಲಿ ll

ಪಾತ್ರೆಯ ಶಬ್ದವು
ಕೇಳಿದ ಮಕ್ಕಳು
ಕುಳಿತರು ಊಟಕ್ಕೆ ll

~~~ರಮ್ಯ **8B**

....................................................................................................
~~~

ಲೇಖನ

## ಬೇಸಗೆ ಕಾಲ

'ಬೇಸಿಗೆಕಾಲ' ಬಂತೆಂದರೆ ಸಾಕು ಮಕ್ಕಳಿಗೆ ರಜೆ ಸಿಗುತ್ತದೆ ಎಂಬ ಆನಂದ. ಅಜ್ಜಿಯ ಮನೆಗೆ ಹೋಗಬೇಕೆಂಬ ಹಂಬಲ. ಒಂದೆಡೆ ಪರೀಕ್ಷೆಯ ಚಿಂತೆ.
ಈಗಿನ ಕಾಲದ ಬೇಸಿಗೆಯಲ್ಲಿ ಬಿಸಿಲು ಅಧಿಕವಾಗಿರುವುದರಿಂದ ತಡೆಯಲು ಆಗುತ್ತಿಲ್ಲ. ಈ ಬಿಸಿಲಿಗೆ ಯಾವ ಕೆಲಸ ಮಾಡಲು ಆಗುವುದಿಲ್ಲ. ಕೆಲಸಕ್ಕೆ ಹೋಗುವವರಂತು ತುಂಬಾ ಸುಸ್ತಾಗುತ್ತಾರೆ. ನೀರು ಕುಡಿದು ಕುಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಬೆವರು ಮೈಯಲ್ಲಿ ಮಳೆಯಲ್ಲಿ ಒದ್ದೆಯಾದ ಹಾಗೆ ' ಒದ್ದೆಯಾಗಿರುತ್ತದೆ '. ಬಾವಿ, ತೋಡು, ನಮ್ಮನ್ನು ಕಾಪಾಡುವ ಭೂಮಾತೆ ಎಲ್ಲವೂ ಬತ್ತಿ ಬರಡಾಗಿದೆ. ಕೃಷಿಕರಿಗೆ ನೋವು ಉಂಟಾಗಿದೆ. ನಾವು ಪತ್ರಿಕೆಗಳಲ್ಲಿ ' ಅದೆಷ್ಟೋ ಜನ ಬಿಸಿಲಿಗೆ ಪ್ರಾಣಕಳೆದುಕೊಂಡಿದ್ದರೆಂದು' ಓದಿರಬಹುದು ಹಾಗೂ ಬಿಸಿಲಿನ ಪ್ರಮಾಣವು ಹೆಚ್ಚಿರುವುದರಿಂದ ಕೆಳಗೆ ನೆಲದಲ್ಲಿ ಕಾವಲಿಯನ್ನು ಇಟ್ಟು ದೋಸೆ ಮಾಡುವ ವಿಚಾರವು ತಿಳಿದು ಬಂದಿತ್ತು.

ಆದರೆ ಈಗಿನ ಜನಾಂಗವು ಬಿಸಿಲಿಗೆ ಕೊಡೆ ಹಿಡಿದುಕೊಂಡು ಹೋಗುತ್ತಾರೆ. ಆರೋಗ್ಯದಲ್ಲಿ ನಾವು ತುಂಬಾ ಜಾಗರೂಕರಾಗಿ ಇರುತ್ತೇವೆ. ಆದರೂ ಚಿಕ್ಕ ಪುಟ್ಟ ರೋಗಗಳು ಬರುತ್ತವೆ.

ಸೂರ್ಯನ ಪ್ರಕಾಶವು ಮನುಷ್ಯನಿಗೆ ಅತ್ಯಗತ್ಯ ಅದು ನಮ್ಮ ಶರೀರಕ್ಕೆ ಬೇಕು. ಸೂರ್ಯನ ಪ್ರಕಾಶವು ಮೈಗೆ ಬೀಳುವುದು ಒಳ್ಳೆಯದು ಅದು ಆರೋಗ್ಯದ ಒಂದು ಅಂಶವಾಗಿದೆ.

ಬೇಸಿಗೆಕಾಲವು ಒಂದು ಕಡೆ 'ನೀರಿಲ್ಲ ' ಎಂಬ ತೊಂದರೆಯನ್ನು ತರುತ್ತದೆ. ಮಕ್ಕಳಿಗೆ ಮುದ ನೀಡುತ್ತದೆ. ಹಿರಿಯರಿಗೆ ಕಷ್ಟವಾಗುತ್ತದೆ. ಬೇಸಿಗೆ ಕಾಲವು ಪ್ರಕೃತಿದತ್ತವಾದದು ಅದನ್ನು ಬದಲಾಯಿಸಲು ಸಾಧ್ಯವಿಲ್ಲ.

~~~ಪುಷ್ಪಾವತಿ .8 A

.........................................................................
~~~

ಮೋಜಿನ ಗಣಿತ

## ಮನಸ್ಸಿನಲ್ಲಿಟ್ಟುಕೊಂಡು ಸಂಖ್ಯೆ ಹೇಳುವುದು

* ಮನಸ್ಸಿನಲ್ಲಿ ಒಂದು ಸಂಖ್ಯೆ ಇಟ್ಟುಕೊಳ್ಳುವಂತೆ ನಿಮ್ಮ ಗೆಳಯನಿಗೆ ಹೇಳಿ.

* ಅದಕ್ಕೆ 2 ರಿಂದ ಗುಣಿಸಲಿ.

* ಈ ಗುಣಲಬ್ದಕ್ಕೆ 3 ನ್ನು ಕೂಡಿಸಲಿ.

* ಬಂದ ಮೊತ್ತಕ್ಕೆ 5 ರಿಂದ ಗುಣಿಸಲಿ.

* ಈ ಗುಣಲಬ್ದದಿಂದ 15 ಕಳೆಯುವಂತೆ ಹೇಳಿ.

* ಬಂದ ಉತ್ತರವನ್ನು ಕೇಳಿ ಪಡೆಯಿರಿ.

ತಕ್ಷಣ ಆತನ ಮನಸ್ಸಿನಲ್ಲಿದ್ದ ಸಂಖ್ಯೆಯನ್ನು ಹೇಳಿಬಿಡಬಹುದು.

ಉದಾ:ಆತ ಮನಸ್ಸಿನಲ್ಲಿ ಇಟ್ಟುಕೊಂಡ ಸಂಖ್ಯೆ 4 ಇರಲಿ.

* ಇದನ್ನು 2 ರಿಂದ ಗುಣಿಸಿದಾಗ 4x2=8

*ಇದಕ್ಕೆ 3 ನ್ನು ಕೂಡಿಸಿ =8+3=11

* ಬಂದ ಮೊತ್ತಕ್ಕೆ 5 ರಿಂದ ಗುಣಿಸಿ=11x 5=55

* ಗುಣಲಬ್ದದಿಂದ 15 ನ್ನು ಕಳೆಯಿರಿ=55    15=40

ಆತ ಮನಸ್ಸಿನಲ್ಲಿಟ್ಟುಕೊಂಡು ಸಂಖ್ಯೆ 4

[ಗುಟ್ಟು:ಆತ ಹೇಳಿದ ಉತ್ತರದ ಕೊನೆಯ ಸ್ಥಾನದಲ್ಲಿರುವ ಸೊನ್ನೆಯನ್ನು ಹೊಡೆದು ಹಾಕಿ ಅದುವೆ ಆತನ ಮನಸ್ಸಿನಲ್ಲಿರುವ ಸಂಖ್ಯೆ.]

~~~ನಿಖಿತಾ ಶೆಟ್ಟಿ.10A
~~~

ಕವನ

## ವಿದ್ಯೆ

ವಿದ್ಯೆ ಒಂದು ದೇವ ನೀಡಿದ ವರವು
ನಮ್ಮನ್ನು ನ್ಯಾಯವಂತರಾಗಿ ಮಾಡುವ ಕಲೆಯು
ನಾಳೆ ವಿದ್ಯೆ ಇದ್ದರೆ ಜನರು ನಮ್ಮ ಹಿಂದೆ
ಇಲ್ಲದೆ ಇದ್ದರೆ ಅವರು ನಮ್ಮ
ಮುಂದೆವಿದ್ಯೆ ಕಲಿತ ಜೀವನ
ನಂದನ ವನದಂತೆ
ಅದಲ್ಲದಿದ್ದರೆ ಮನೆಯಲ್ಲಿ
ಅವನ ಜೀವನ ಕಷ್ಟಕರವಾದುದು

~~~ಮೊಹಮ್ಮದ್ ಫಾರೂಕ್. 9A

---

ಕವನ

## ಸಂಜೆಯ ಸಮಯ


ಬಾನಿಂದಿಳಿದನು
ಬೆಳಗುವ ಸೂರ್ಯನು
ಸಂಜೆಯ ಸಮಯದಲ್ಲಿ
ಆಡುವ ಮಕ್ಕಳ
ಬಳಗವು ಸಾಗಿತು
ಮನೆಕಡೆ ನಲಿಯುತಲಿ
ಸಂಜೆಯ ಹೊತ್ತಲಿ
ಮುಳುಗುವ ಸೂರ್ಯನ
ಹೊಂಬಣ್ಣ ರಮಿಸುತಲಿ
~~~

ರಾತ್ರಿಯ ಹೊತ್ತಲಿ
ಬಾನವು ಮಿನುಗಿತು
ನಕ್ಷತ್ರಲೋಕದೆಡೆಯಲ್ಲಿ
ರಾತ್ರಿಯ ಹೊತ್ತಲಿ
ಬೆಳ್ಳಿಯ ಚಂದ್ರನು
ಜಗವನ್ನು ಬೆಳಗಿಸುವನು.

~~~ ದೀಕ್ಷ . ಸಿ.8B



~~~MOHAMMED ZUBAIR 9C





ONAM CELEBRATION-2019



GANDHI JAYANTHI CELEBRATION 2019



SEVANA VARAM…1



SEVANA VARAM…2



ಪ್ರತಿಭೆಯೊಂದಿಗೆ ಒಂದು ದಿನ 1



ಪ್ರತಿಭೆಯೊಂದಿಗೆ ಒಂದು ದಿನ 2



ಕನ್ನಡ ಮನಸುಗಳು ಬೆಂಗಳೂರು ತಂಡದ ಸದಸ್ಯರು



ಕನ್ನಡ ಮನಸುಗಳು ಬೆಂಗಳೂರು ತಂಡದ ಸದಸ್ಯರಿಗೆ ಬೀಳ್ಕೊಡುಗೆ



ಮಕ್ಕಳ ದಿನಾಚರಣೆ



ವಿಶೇಷ ಸಾಮರ್ಥ್ಯವುಳ್ಳವರನ್ನು ಆದರಿಸಿದಾಗ.......

## ಉಪಸಂಹಾರ

ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಡಿಜಿಟಲ್ ಮ್ಯಾಗಸಿನಿಗೆ ಬಹಳಷ್ಟು ಪ್ರಾಧಾನ್ಯವಿದೆ. ಪ್ರಸಕ್ತ ಕಾಲಘಟ್ಟದಲ್ಲಿ ಇದು ಹೆಚ್ಚು ಸೂಕ್ತವಾಗಿದೆ. ಆರ್ಥಿಕ ದೃಷ್ಟಿಯಿಂದ ಇದು ಲಾಭದಾಯಕವೂ ಹೌದು. ಕಡಿಮೆ ಸಮಯದಲ್ಲಿ ಕಡಿಮೆ ವೆಚ್ಚದಲ್ಲಿ ಕಾರ್ಯಗಳನ್ನು ನಿರ್ವಹಿಸಲು ಸುಲಭ ಸಾಧ್ಯ. ಮಕ್ಕಳಿಗೆ ಹೆಚ್ಚು ಆಸಕ್ತಿದಾಯಕವಾಗಿದೆ. ಮಾಹಿತಿ ತಂತ್ರಜ್ಞಾನದಲ್ಲಿರುವ ಮಕ್ಕಳ ಪ್ರತಿಭೆಯು ಹೊರ ಹೊಮ್ಮಲಿರುವ ಮಾಧ್ಯಮವಾಗಿ ಇದನ್ನು ಕಾಣಬಹುದು. ಇದು ಮುಂದಿನ ಯೋಚನೆ ಹಾಗೂ ಯೋಜನೆಗೆ ಪ್ರೇರಕವೂ ಹೌದು. ಇಂತಹ ಚಟುವಟಿಕೆಗಳು ನಿರಂತರವಾಗಿ ಸಾಗಿ ಎಲ್ಲರಿಗೂ ಪ್ರೇರಣೆಯಾಗಲೆಂದು ಆಶಿಸುತ್ತಿದ್ದೇನೆ.

............................................................................................

# THANKS

# FOR

# ALL